ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-08-1971.

***ಮುಖ್ಯವಾದ ಏಳು ಬಲಹೀನತೆಗಳು ಮತ್ತು ಅವುಗಳನ್ನು ತೊಲಗಿಸಲು ಏಳುದಿನದ ಕೋರ್ಸ್***

(मुख्य 7 कमजोरियां और उनको मिटाने के लिए 7 दिन का कोर्स)

ಒಂದು ಕ್ಷಣದಲ್ಲಿ ವಾಣಿಯಿಂದ ದೂರದ ಸ್ಥಿತಿಯಲ್ಲಿ ಸ್ಥಿತರಾಗಬಲ್ಲಿರಾ? ಹೇಗೆ ಕರ್ಮೇಂದ್ರಿಯಗಳನ್ನು ಯಾವಾಗ ಬೇಕೋ, ಹೇಗೆ ಬೇಕೋ ಅಲುಗಾಡಿಸಬಲ್ಲಿರಿ. ಹಾಗೆಯೇ ಬುದ್ಧಿಯ ಲಗನ್‌ನ್ನು ಎಲ್ಲಿ ಬೇಕೋ, ಯಾವಾಗ ಬೇಕೋ ಹಾಗೆಯೇ ಸ್ಥಿತ ಮಾಡಬಲ್ಲಿರಾ? ಇಷ್ಟು ಪವರ್‌ಫುಲ್ ಆಗಿದ್ದೀರಾ? ಈ ವಿಧಿಯು ವೃದ್ಧಿಯಾಗುತ್ತಾ ಹೋಗುತ್ತಿದೆಯೇ? ಒಂದುವೇಳೆ ವಿಧಿಯು ಯಥಾರ್ಥವಾಗಿದ್ದರೆ ವಿಧಿಯಿಂದ ಸಿದ್ಧಿ ಅರ್ಥಾತ್ ಸಫಲತೆ ಮತ್ತು ಶ್ರೇಷ್ಠತೆಯು ಅವಶ್ಯವಾಗಿ ದಿನ-ಪ್ರತಿದಿನ ವೃದ್ಧಿಯಾಗುವ ಅನುಭವ ಮಾಡುತ್ತೀರಿ. ಈ ಪರಿಣಾಮದಿಂದ ತಮ್ಮ ಪುರುಷಾರ್ಥದ ಯಥಾರ್ಥ ಸ್ಥಿತಿಯನ್ನು ಪರಿಶೀಲಿಸಬಹುದು. ಈ ಸಿದ್ಧಿಯು ವಿಧಿಯನ್ನು ಗುರುತಿಸುವ ಮುಖ್ಯ ಚಿಹ್ನೆಯಾಗಿದೆ. ಯಾವುದೇ ಮಾತನ್ನು ಗುರುತಿಸಲು ಚಿಹ್ನೆಗಳಿರುತ್ತವೆ ಅಂದಮೇಲೆ ಈ ಚಿಹ್ನೆಯಿಂದ ತಮ್ಮ ಸಂಪೂರ್ಣ ಬುದ್ಧಿಯ ಲಕ್ಷಣವನ್ನು ಗುರುತಿಸಬಹುದು. ಇತ್ತೀಚೆಗೆ ಯಾವ ಪುರುಷಾರ್ಥ ನಡೆಯುತ್ತಿದೆ ಅದರಲ್ಲಿ ಪುರುಷಾರ್ಥಿಗಳ ಮುಖ್ಯ ಬಲಹೀನತೆಗಳು ಯಾವುದು ಕಾಣಿಸುತ್ತಿದೆ? ಒಂದನೆಯದು 1. ಸ್ಮೃತಿಯಲ್ಲಿ ಸಾಮರ್ಥ್ಯವಿಲ್ಲ. 2. ದೃಷ್ಟಿಯಲ್ಲಿ ದಿವ್ಯತೆ ಮತ್ತು ಅಲೌಕಿಕತೆಯು ಯಥಾಶಕ್ತಿ, ನಂಬರ್‌ವಾರ್ ಬಂದಿದೆ. 3. ವೃತ್ತಿಯಲ್ಲಿ ವಿಲ್‌ಪವರ್ ಇಲ್ಲದಿರುವಕಾರಣ ವೃತ್ತಿ ಏಕರಸವಾಗಿರದೆ ಚಂಚಲವಾಗುತ್ತದೆ. 4. ನಿರಾಕಾರಿ ಸ್ಥಿತಿಯ ಅಟೆನ್ಷನ್ ಕಡಿಮೆಯಿರುವ ಕಾರಣ ಮುಖ್ಯವಿಕಾರಗಳಾದ ದೇಹಾಭಿಮಾನ, ಕಾಮ ಮತ್ತು ಕ್ರೋಧ - ಈ ಮೂರು ಸಮಯ-ಪ್ರತಿಸಮಯ ದಾಳಿ ಮಾಡುತ್ತಿರುತ್ತದೆ. 5. ಸಂಘಟನೆಯಲ್ಲಿರುತ್ತಾ ಹಾಗೂ ಸಂಪರ್ಕದಲ್ಲಿ ಬರುತ್ತಾ ವಾಯುಮಂಡಲ, ವೈಬ್ರೇಷನ್ ತನ್ನ ಪ್ರಭಾವ ಬೀರುತ್ತದೆ. 6. ಅವ್ಯಕ್ತ ಫರಿಶಾಸ್ಥಿತಿಯು ಕಡಿಮೆಯಿರುವ ಕಾರಣ ಒಳ್ಳೆಯ ಹಾಗೂ ಕೆಟ್ಟಮಾತುಗಳ ಫೀಲಿಂಗ್ ಬರುತ್ತದೆ, ಇದರಿಂದ ಫೇಲ್ ಆಗಿಬಿಡುತ್ತಾರೆ. 7, ತಮ್ಮ ನೆನಪಿನ ಯಾತ್ರೆಯಿಂದ ಪೂರ್ಣಸಂತುಷ್ಟರಾಗಿಲ್ಲ. ಇದಾಗಿದೆ- ಪುರುಷಾರ್ಥಿಗಳ ಪುರುಷಾರ್ಥದ ನಂಬರ್‌ವಾರ್ ರಿಸಲ್ಟ್.

ಈಗ ಈ ಏಳು ವಿಷಯಗಳನ್ನು ಕಳೆಯುವುದಕ್ಕಾಗಿ ಪುನಃ ಏಳು ದಿನದ ಕೋರ್ಸ್ ಪಡೆಯಬೇಕಾಗಿದೆ. ಈ ಏಳು ವಿಷಯಗಳನ್ನು ಮುಂದಿಟ್ಟು ಕೊಂಡು ಏಳು ದಿನದ ಕೋರ್ಸ್ ಹೇಗೆ ಅನ್ಯರಿಗೆ ಮಾಡಿಸುತ್ತೀರೋ ಹಾಗೆಯೇ ತಮಗೆ ತಾವು ಈಗ ರಿವೈಜ್ ಮಾಡಿಕೊಳ್ಳಿರಿ. ಹೇಗೆ ಮುರುಳಿಗಳನ್ನು ಈಗ ರಿವೈಜ್ ಮಾಡಿಕೊಳ್ಳುತ್ತಿದ್ದೀರಿ, ರಿವೈಜ್ ಮಾಡುವುದರಿಂದ ನವೀನತೆ ಮತ್ತು ಶಕ್ತಿ ಹೆಚ್ಚುವ ಅನುಭವ ಮಾಡುತ್ತೀರಿ ಹಾಗೆಯೇ ಈಗ ಏಕಾಂತದಲ್ಲಿ ಕುಳಿತು ಅಮೃತವೇಳೆ ಯಾವ ಏಳು ಮಾತುಗಳನ್ನು ತಿಳಿಸಿದೆವೋ ಅದರ ಒಂದೊಂದು ಮಾತಿನ ನಿವಾರಣೆಯು ಪ್ರತೀದಿನದ ಪಾಠದಲ್ಲಿ ಹೇಗೆ ಸಮಾವೇಶವಾಗಿದೆ. ಅದನ್ನು ಮನನ ಮಾಡಿ ಬೆಣ್ಣೆ ಅರ್ಥಾತ್ ಸಾರವನ್ನು ತೆಗೆಯಿರಿ ಹಾಗೂ ಪರಸ್ಪರ ವಾರ್ತಾಲಾಪ ಮಾಡಿ. ಕೋರ್ಸಂತೂ ತೆಗೆದುಕೊಂಡಿದ್ದೀರಿ ಆದರೆ ಹೇಗೆ ಹೊಸದಾಗಿ ಬರುವವರಿಗೆ ಕೋರ್ಸ್ ಕೊಟ್ಟನಂತರ ಪ್ರತೀ ಪಾಠದ ಯುಕ್ತಿಯನ್ನು ಹೇಳಿಕೊಡುತ್ತೀರಿ ಹಾಗೂ ಅಟೆನ್ಶನ್ ತರಿಸುತ್ತೀರಿ. ಹಾಗೆಯೇ ತಾವು ಪ್ರತಿಯೊಬ್ಬ ರೆಗ್ಯುಲರ್ ಈಶ್ವರೀಯ ವಿದ್ಯಾರ್ಥಿಯು ಈಗ ಪುನಃ ಒಂದುವಾರ ಒಂದೊಂದು ಪಾಠವನ್ನು ಪ್ರ್ಯಾಕ್ಟಿಸ್ ಮತ್ತು ಪ್ರಾಕ್ಟಿಕಲ್‌ನಲ್ಲಿ ತನ್ನಿರಿ. ಹೇಗೆ ಸಾಪ್ತಾಹಿಕ ಪಾಠ ಮಾಡುತ್ತಾರಲ್ಲವೆ. ತಾವೂ ಸಹ ಸೇವೆಯಲ್ಲಿ ಪವಿತ್ರತೆಯ ಸಪ್ತಾಹ, ಶಾಂತಿಸಪ್ತಾಹದ ಕಾರ್ಯಕ್ರಮಗಳನ್ನು ಇಡುತ್ತೀರಲ್ಲವೆ ಹಾಗೆಯೇ ತಮ್ಮ ಉನ್ನತಿಗಾಗಿ ಪ್ರತೀ ಪಾಠದ ಸಾಪ್ತಾಹಿಕ ಪಾಠವನ್ನು ಪ್ರಾಕ್ಟಿಕಲ್ ಮತ್ತು ಪ್ರಾಕ್ಟಿಸ್‌ನಲ್ಲಿ ತನ್ನಿರಿ. ರಿವೈಜ್ ಆಗುವುದರಿಂದ ಏನಾಗುವುದು? ಸಫಲತೆಯು ಸಮೀಪ ಸಹಜ ಮತ್ತು ಸ್ಪಷ್ಟವಾಗಿ ಕಾಣುವುದು. ಅಂದಮೇಲೆ ಶ್ರೇಷ್ಠರಾಗಿಬಿಡುವಿರಿ. ತಮ್ಮನ್ನು ತಾವು ಪ್ರತೀ ಸಂಕಲ್ಪ ಹಾಗೂ ಕರ್ಮದಲ್ಲಿ ಮಹಾನ್ ಮಾಡಿಕೊಳ್ಳಲು ಎಲ್ಲರಿಗೆ ಸಹಜಯುಕ್ತಿಯ ಮೂರುಮಾತುಗಳನ್ನು ತಿಳಿಸಿ. ಮನ-ವಚನ-ಕರ್ಮದಲ್ಲಿ ಮಹಾನತೆಗಾಗಿಯೇ ಕೇಳುತ್ತಿದ್ದೇವೆ.

ಶ್ರೇಷ್ಠ(ಮಹಾನ್)ರಾಗಬೇಕೆಂದರೆ ಮೊದಲನೆಯದಾಗಿ ತಮ್ಮನ್ನು ಈ ಹಳೆಯ ಪ್ರಪಂಚದಲ್ಲಿ ಮೆಹಮಾನ್ (ಅತಿಥಿ) ಎಂದು ಎರಡನೆಯ ಮಾತು ಯಾವುದೇ ಸಂಕಲ್ಪ ಹಾಗೂ ಕರ್ಮ ಮಾಡುತ್ತೀರೆಂದರೆ ಮಹಾನ್ ಅಂತರವನ್ನು ಬುದ್ಧಿಯಲ್ಲಿಟ್ಟುಕೊಂಡು ಸಂಕಲ್ಪ ಹಾಗೂ ಕರ್ಮ ಮಾಡಿ. ಮೂರನೆಯ ಮಾತೇನೆಂದರೆ ತಂದೆ ಹಾಗೂ ತನ್ನ ದೈವೀ ಪರಿವಾರದ ಪ್ರತಿಯೊಂದು ಆತ್ಮನ ಗುಣ ಹಾಗೂ ಶ್ರೇಷ್ಠಕರ್ತವ್ಯದ ಮಹಿಮೆ ಮಾಡುತ್ತಾ ಇರಿ, 1. ಮೆಹಮಾನ್ 2, ಮಹಾನ್ ಅಂತರ ಮತ್ತು 3. ಮಹಿಮೆ. ಈ ಮೂರೂ ಮಾತುಗಳು ನಡೆಯುತ್ತಿದ್ದರೆ ಏಳು ಬಲಹೀನತೆಗಳು ಸಮಾಪ್ತಿಯಾಗುವವು. ಮೆಹಮಾನ್ ಎಂದು ತಿಳಿಯದಿರುವ ಕಾರಣ ಯಾರದೇ ರೂಪ ಹಾಗೂ ರಂಗಿನಲ್ಲಿ ಆಕರ್ಷಣೆ ಹಾಗೂ ಅಟೆನ್ಶನ್ ಹೋಗುತ್ತದೆ. ಮಹಾನ್ ಅಂತರವನ್ನು ಮುಂದಿಟ್ಟು ಕೊಳ್ಳುವುದರಿಂದ ಎಂದೂ ದೇಹ ಅಹಂಕಾರ, ಕ್ರೋಧದ ಅಂಶ ಹಾಗೂ ವಂಶವೂ ಇರುವುದಿಲ್ಲ. ಮೂರನೆಯ ಮಾತು ತಂದೆ ಹಾಗೂ ಪ್ರತಿಯೊಂದು ಆತ್ಮನ ಗುಣಗಳ ಮಹಿಮೆ ಹಾಗೂ ಕರ್ತವ್ಯದ ಮಹಿಮೆ ಮಾಡುತ್ತಿದ್ದಾಗ ಯಾರದೇ ಮೂಲಕ ಯಾವುದೇ ಮಾತಿನ ಫೀಲಿಂಗ್ ಬರುವುದಿಲ್ಲ ಮತ್ತು ಸದಾ ಗುಣಗಳು ಹಾಗೂ ಕರ್ತವ್ಯಗಳ ಮಹಿಮೆ ಮಾಡುವುದರಿಂದ ನೆನಪಿನ ಯಾತ್ರೆಯ ಕೊರತೆಯೂ ಸಹ ನಿರಂತರ ಹಾಗೂ ಸಹಜ ನೆನಪಿನಲ್ಲಿ ಪರಿವರ್ತನೆಯಾಗಿಬಿಡುವುದು. ಈ ಮೂರೂ ಶಬ್ದಗಳನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿ ಆಗ ಸಮರ್ಥವಂತರಾಗಿಬಿಡುತ್ತೀರಿ. ದೃಷ್ಟಿ, ವೃತ್ತಿ, ವಾಯುಮಂಡಲ ಎಲ್ಲವೂ ಪರಿವರ್ತನೆಯಾಗಿಬಿಡುವುದು. ದ್ವಾಪರದಿಂದ ಹಿಡಿದು ಇಂದಿನವರೆಗೆ ತಮ್ಮ ಹಾಗೂ ತಮ್ಮ ದೈವೀಪರಿವಾರದ ಆತ್ಮರ ಮಹಿಮೆ ಮಾಡುತ್ತಾ ಬಂದಿದ್ದೀರಿ, ಕೀರ್ತನೆ ಮಾಡುತ್ತಾ ಬಂದಿದ್ದೀರಿ. ಅಂದಮೇಲೆ ಈಗ ಚೈತನ್ಯವಾಗಿ ಪರಿಚಿತರಾಗಿರುವ ಆತ್ಮರ ಅವಗುಣಗಳನ್ನು ಹಾಗೂ ನಿರ್ಬಲತೆಗಳನ್ನು ಏಕೆ ನೋಡುತ್ತೀರಿ ಹಾಗೂ ಬುದ್ಧಿಯಲ್ಲಿ ಏಕೆ ಧಾರಣೆ ಮಾಡಿಕೊಳ್ಳುತ್ತೀರಿ? ಈಗಲೂ ಸಹ ಇಡೀ ವಿಶ್ವದಿಂದ ಆಯ್ಕೆಮಾಡಲ್ಪಟ್ಟಿರುವ ಶ್ರೇಷ್ಠಾತ್ಮರ ಗುಣಗಾನ ಮಾಡಿ. ಬುದ್ಧಿಯ ಮೂಲಕ ಗುಣಗಳನ್ನು ಗ್ರಹಿಸಿ ಮತ್ತು ಬಾಯಿಯ ಮೂಲಕ ಒಬ್ಬರು ಇನ್ನೊಬ್ಬರ ಗುಣಗಾನ ಮಾಡಿ ಆಗ ದೃಷ್ಟಿ ಹಾಗೂ ವೃತ್ತಿ ಚಂಚಲವಾಗುವುದೇ? ಯಾರದೇ ಬಲಹೀನತೆಯ ಫೀಲಿಂಗ್ ಬರುವುದೇ? ಈಗಲೂ ಅನುಭವ ಮಾಡುತ್ತೀರಿ- ಯಾವುದೇ ಮಂದಿರದ ಮೂರ್ತಿ ಎಷ್ಟಾದರೂ ಆಕರ್ಷಣೀಯ ಹಾಗೂ ಸುಂದರವಾಗಿ ಶೃಂಗರಿಸಲ್ಪಟ್ಟಿರಲಿ ಆದರೆ ಎಂದೂ ಸಹ ದೃಷ್ಟಿಯು ಅವರ ಸುಂದರತೆ ಹಾಗೂ ಶೃಂಗಾರದಕಡೆ ಹೋಗಿ ಬುದ್ಧಿ ಸಂಕಲ್ಪಮಾತ್ರದಲ್ಲಿಯೂ ಚಂಚಲವಾಗುವುದಿಲ್ಲ. ಆದೇ ಒಂದುವೇಳೆ ಯಾವುದೇ ಸಿನಿಮಾ ಹಾಗೂ ಯಾವುದೇ ಅಂತಹ ಪುಸ್ತಕಗಳಲ್ಲಿ ಆಕರ್ಷಣೆ ಹಾಗೂ ಶೃಂಗಾರಿತ ಚಿತ್ರವನ್ನು ನೋಡಿದರೆ ಅಥವಾ ಯಾವುದೇ ಬೋರ್ಡನ್ನು ನೋಡಿದಾಗಲೂ ವೃತ್ತಿ ಮತ್ತು ದೃಷ್ಟಿಯು ಚಂಚಲವಾಗಿಬಿಡುತ್ತದೆ ಏಕೆ? ವಾಸ್ತವದಲ್ಲಿ ಮೂರ್ತಿ ಗಳಲ್ಲಿಯೂ ಆಕರ್ಷಣೆಯಿದೆ. ಶೃಂಗಾರ, ರೂಪ ಹಾಗೂ ಸೌಂದರ್ಯ ಮೂರ್ತಿಗಳಲ್ಲಿಯೂ ಇದೆ ಆದರೂ ಸಹ ವೃತ್ತಿ ಮತ್ತು ದೃಷ್ಟಿ ಏಕೆ ಚಂಚಲವಾಗುವುದಿಲ್ಲ. ಎರಡೂ ಚಿತ್ರಗಳನ್ನು ಮುಂದಿಟ್ಟುಕೊಳ್ಳಿ ಹಾಗೂ ಒಂದೇ ಕೋಣೆಯಲ್ಲಿಟ್ಟುಕೊಳ್ಳಿರಿ. ಒಂದು ಕ್ಷಣದಲ್ಲಿ ಆ ಚಿತ್ರವನ್ನು ನೋಡಿದಾಗ, ವೃತ್ತಿ ಚಂಚಲವಾಗುತ್ತದೆ ಮತ್ತು ದೇವತೆಗಳ ಚಿತ್ರದಕಡೆ ನೋಡಿದಾಗ ವೃತ್ತಿಯು ಪವಿತ್ರವಾಗಿಬಿಡುತ್ತದೆ. ಈ ಪವಿತ್ರತೆ ಹಾಗೂ ಅಪವಿತ್ರತೆಗೆ ಕಾರಣವೇನಾಗುತ್ತದೆ? ಸ್ಮೃತಿ. ಇವರು ದೇವಿಯಾಗಿದ್ದಾರೆ ಎಂಬ ಸ್ಮೃತಿಯು ದೃಷ್ಟಿ ಮತ್ತು ವೃತ್ತಿಯನ್ನು ಪವಿತ್ರವನ್ನಾಗಿ ಮಾಡುತ್ತದೆ ಮತ್ತು ಇವರು ಸ್ತ್ರೀಯಾಗಿದ್ದಾರೆ ಎಂಬ ಸ್ಮೃತಿಯು ವೃತ್ತಿ ಹಾಗೂ ದೃಷ್ಟಿಯನ್ನು ಅಪವಿತ್ರತೆಯ ಕಡೆ ಸೆಳೆಯುತ್ತದೆ ಏಕೆಂದರೆ ದೇವಿಯರಲ್ಲಿ ಆತ್ಮೀಯತೆಯನ್ನು ನೋಡುತ್ತಾರೆ. ಅಲ್ಲಿ ರೂಪವನ್ನು ನೋಡುತ್ತಾರೆ. ತಮ್ಮದೂ ಈ ರೀತಿಯ ಅನುಭವವಿರಬೇಕಲ್ಲವೆ. ವರ್ತಮಾನದಲ್ಲಿಯೂ ಪರ್ಸೆಂಟೇಜ್‌ನಲ್ಲಿದೆ ಆದರೆ ಇದನ್ನು ಕಳೆಯುವುದಕ್ಕಾಗಿ ಎಲ್ಲಿಯೇ ನೋಡುತ್ತೀರಿ. ಯಾರೊಂದಿಗಾದರೂ ಮಾತನಾಡುತ್ತೀರಿ, ಆದರೆ ಸ್ಮೃತಿಯಲ್ಲಿ ಏನು ಇಟ್ಟುಕೊಳ್ಳುವಿರಿ? ಆತ್ಮವೆಂದು ತಿಳಿದುಕೊಳ್ಳುವುದು ಮೊದಲಸ್ಟೇಜ್ ಆಯಿತು. ಕರ್ಮದಲ್ಲಿ ಬರುತ್ತಾ, ಸಂಪರ್ಕದಲ್ಲಿ ಬರುತ್ತಾ, ಸಂಬಂಧದಲ್ಲಿ ಬರುತ್ತಾ ಇದೇ ಸ್ಮೃತಿಯನ್ನು ಇಟ್ಟುಕೊಳ್ಳಿ ಇವರೆಲ್ಲರೂ ಜಡಚಿತ್ರಗಳ ಚೈತನ್ಯ ದೇವಿ ಹಾಗೂ ದೇವತೆಗಳ ರೂಪವಾಗಿದ್ದಾರೆ. ದೇವಿಯ ರೂಪವು ಸ್ಮೃತಿಯಲ್ಲಿ ಬಂದಾಗ ಹೇಗೆ ಜಡಚಿತ್ರಗಳಲ್ಲಿಯೂ ಎಂದೂ ಸಂಕಲ್ಪಮಾತ್ರವೂ ಅಪವಿತ್ರತೆ ಹಾಗೂ ದೇಹದ ಆಕರ್ಷಣೆ ಆಗುವುದಿಲ್ಲವೋ ಹಾಗೆಯೇ ಚೈತನ್ಯರೂಪದಲ್ಲಿಯೂ ಈ ಸ್ಮೃತಿಯಿಟ್ಟುಕೊಳ್ಳುವುದರಿಂದ ಸಂಕಲ್ಪದಲ್ಲಿಯೂ ಈ ಕಂಪ್ಲೇಂಟ್

ಇರುವುದಿಲ್ಲ ಮತ್ತು ಕಂಪ್ಲಿಟ್ ಆಗಿಬಿಡುತ್ತೀರಿ. ತಿಳಿಯಿತೇ. ಇವು ವರ್ತಮಾನ ಪುರುಷಾರ್ಥಿಗಳ ಕಂಪ್ಲೇಂಟ್‌ನ ಮೇಲೆ ಕಂಪ್ಲಿಟ್ ಆಗುವ ಯುಕ್ತಿಗಳಾಗಿವೆ. ಒಳ್ಳೆಯದು

ಭಟ್ಟಿಯಲ್ಲಿರುವವರು ತಮ್ಮ ಉನ್ನತಿ ಮಾಡಿ ಕೊಳ್ಳುತ್ತಿದ್ದೀರಿ. ಪುರುಷಾರ್ಥದ ಗತಿಯೂ ತೀವ್ರವಾಗಿದೆಯೇ? ಸಮಾಪ್ತಿಯ ನಂತರ ಕೆಳಗಿಳಿಯುತ್ತಾ ಪುರುಷಾರ್ಥದ ಗತಿಯು ಕಡಿಮೆಯಾಗಿ ಬಿಡಬಾರದು. ಹಾಗೆಯೇ ಪುರುಷಾರ್ಥ ಮಾಡುತ್ತಿದ್ದೀರಲ್ಲವೆ. ಒಳ್ಳೆಯದು.

ಅವ್ಯಕ್ತ ಮುರಳಿ 25-08-2971.

***ಮುಖ್ಯವಾದ ಏಳು ಬಲಹೀನತೆಗಳು ಮತ್ತು ಅವುಗಳನ್ನು ತೊಲಗಿಸುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.***

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದು ಕ್ಷಣದಲ್ಲಿ ವಾಣಿಗೆ ಅತೀತವಾಗಿರುವ ಸ್ಥಿತಿಗೆ ತಲುಪಿ, ಬುದ್ಧಿಯ ಸಂಲಗ್ನತೆಯನ್ನು ಎಲ್ಲಿ ಬೇಕೋ, ಯಾವಾಗ ಬೇಕೋ ಆಗ ಸ್ಥಿತ ಮಾಡಬಲ್ಲ ಶಕ್ತಿ ಸ್ವರೂಪ.

2. ನಾನು ವಿಧಿಯಿಂದ ಸಿದ್ಧಿಯನ್ನು ಹೊಂದಿ ಸಫಲತೆಯನ್ನು ಪಡೆದಿದ್ದೇನೆ.

3. ನಾನು ಸ್ಮೃತಿಯಲ್ಲಿ ಸಮರ್ಥತೆಯನ್ನು, ದೃಷ್ಟಿಯಲ್ಲಿ ದಿವ್ಯತೆಯನ್ನು, ವೃತ್ತಿಯಲ್ಲಿ ವಿಲ್ ಪವರನ್ನು, ಸಂಘಟನೆಯಲ್ಲಿ ಇರುತ್ತಲೂ, ಸಂಪರ್ಕದಲ್ಲಿ ಬರುತ್ತಲೂ, ನಿರಾಕಾರ ಸ್ಥಿತಿಯಿಂದ ವಾಯುಮಂಡಲವನ್ನು ಅವ್ಯಕ್ತವಾಗಿ ತಯಾರು ಮಾಡುವ ಅವ್ಯಕ್ತ ಫರಿಶ್ತಾ.

4. ನಾನು ಸ್ವಉನ್ನತಿಗಾಗಿ ಪ್ರತಿ ಪಾಠವನ್ನು ಧಾರಣೆ ಮಾಡಿ ಸಫಲತೆಯನ್ನು ಸಮೀಪವಾಗಿ, ಸಹಜವಾಗಿ, ಸ್ಪಷ್ಟವಾಗಿ ಮಾಡಿಕೊಂಡು ಪ್ರತಿ ಸಂಕಲ್ಪ, ಪ್ರತಿ ಕರ್ಮದಲ್ಲಿ ಶ್ರೇಷ್ಠವಾಗಿ (ಮಹಾನ್) ತಯಾರಾಗಿದ್ದೇನೆ.

5.ನಾನು ಮನಸಾ, ವಾಚಾ, ಕರ್ಮಣಾದಲ್ಲಿ ಮಹಾನತೆಯನ್ನು ತಂದಿರುವ ಮಹಾನ್ ಸ್ವರೂಪ.

6. ನಾನು ಈ ಹಳೆಯ ಪ್ರಪಂಚದಲ್ಲಿ ಅತಿಥಿ ಎಂದು ಭಾವಿಸಿ ಮಹಾನ್ ಅಂತರವನ್ನು ಬುದ್ಧಿಯಲ್ಲಿಟ್ಟುಕೊಂಡು ಸಂಕಲ್ಪ ಅಥವಾ ಕರ್ಮವನ್ನು ಮಾಡುವ ಮಹಾನ್ ಸ್ವರೂಪ.

7. ನಾನು ತಂದೆ ಮತ್ತು ದೈವೀ ಪರಿವಾರದಲ್ಲಿರುವ ಪ್ರತಿಯೊಬ್ಬರ ಗುಣಗಳನ್ನು, ಶ್ರೇಷ್ಠ ಕರ್ತವ್ಯದ ಮಹಿಮೆಯನ್ನು ಮಾಡುವ ಮಹಾನ್ ಸ್ವರೂಪ.

8. ನಾನು ಯಾರನ್ನು ನೋಡಿದರೂ, ಯಾರೊಂದಿಗೆ ಮಾತನಾಡಿದರೂ, ಪ್ರತಿ ಕರ್ಮದಲ್ಲಿರುತ್ತಲೂ, ಸಂಪರ್ಕದಲ್ಲಿ ಇರುತ್ತಲೂ ಇವರು ಚೈತನ್ಯ ದೇವಿ ದೇವತೆಯರು ಎಂಬ ಆತ್ಮಿಕ ಸ್ಥಿತಿಯಲ್ಲಿರುವ ಪವಿತ್ರ ಸ್ವರೂಪ.

9. ನಾನು ನನ್ನ ವೃತ್ತಿಯನ್ನು ಮತ್ತು ದೃಷ್ಟಿಯನ್ನು ಪವಿತ್ರವಾಗಿ ತಯಾರು ಮಾಡಿಕೊಂಡಿದ್ದೇನೆ.